## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 319 |
| ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 19-07-2024. |

******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಮೂರು ವರ್ಷದ ಅವಧಿಯಲ್ಲಿ ಎಷ್ಟು ಬಾಲ್ಯ ವಿವಾಹಗಳ ಪ್ರಕರಣಗಳು ನಡೆದಿದೆ: (ಜಿಲ್ಲಾವಾರು ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ನಡೆದ ಬಾಲ್ಯ ವಿವಾಹ ಪ್ರಕರಣಗಳ ಕುರಿತು ಜಿಲ್ಲಾ ಉಪನಿರ್ದೇಶಕರುಗಳಿಂದ ಸ್ವೀಕೃತವಾದ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1 ಮತ್ತು 2ರಲ್ಲಿ** ಒದಗಿಸಿದೆ. |
| ಆ) | 18 ವರ್ಷದೊಳಗಿನ ಮಕ್ಕಳ ರಕ್ಷಣೆಗೆ ಇರುವ ಕಾನೂನುಗಳು ಯಾವುವು: | ಬಾಲ್ಯವಿವಾಹ ನಿಷೇಧ ಕಾಯ್ದೆ, 2006 ಮತ್ತು ಕರ್ನಾಟಕ ತಿದ್ದುಪಡಿ ಕಾಯ್ದೆ 2016ರಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ 18 ವರ್ಷದೊಳಗಿನ ಮಕ್ಕಳ ಪಾಲನೆ ಮತ್ತು ರಕ್ಷಣೆಗೆ ಕೆಳಕಂಡ ಕಾನೂನುಗಳು ಜಾರಿಗೊಳಿಸಲಾಗುತ್ತದೆ.<br><br>1. ಪಾಲನೆ ಮತ್ತು ರಕ್ಷಣೆ ಅವಶ್ಯವಿರುವ ಹಾಗೂ ಕಾನೂನು ಸಂಘರ್ಷಕ್ಕೊಳಪಟ್ಟ ಮಕ್ಕಳಿಗಾಗಿ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015 ಪರಿಷ್ಕೃತ ಕಾಯ್ದೆ-2021 ಹಾಗೂ ಮಾದರಿ ನಿಯಮಗಳು 2016 ಪರಿಷ್ಕೃತ ನಿಯಮಗಳು-2022.<br>2. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ನಿಯಂತ್ರಿಸಲು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012 ಮತ್ತು ನಿಯಮಗಳು 2020 (Protection of Children from Sexual Offences Act 2012 and Rules 2020)<br>3. ಮಕ್ಕಳನ್ನು ಕಾನೂನು ಬದ್ಧವಾಗಿ ದತ್ತು ಸಂಸ್ಥೆಗಳ ಮೂಲಕ ದತ್ತು ನೀಡಲು ದತ್ತು ಅಧಿಸೂಚನೆ 2022 (Adoption Regulation 2022)<br>4. ಬಾಲ್ಯ ವಿವಾಹ ನಿಷೇಧ ಕಾಯ್ದೆ-2006 (The Prohibition of Child Marriage Act 2006)<br>5. ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ಮತ್ತು ತಿದ್ದುಪಡಿ ಕಾಯ್ದೆ 2016 ( Child Labour Prohibition and Regulation) Act 2016 |
| ಇ) | ಮಕ್ಕಳ ಮೇಲೆ ಆಗುತ್ತಿರುವ ದೌರ್ಜನ್ಯ ಹಾಗೂ ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಸರ್ಕಾರ ಯಾವ ಯಾವ | ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟಲು ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಮೇಲ್ಕಂಡ ಕಾಯ್ದೆಗಳೊಂದಿಗೆ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ.<br><br>**ಮಕ್ಕಳ ರಕ್ಷಣಾ ನಿರ್ದೇಶನಾಲಯ** |

| | | |
|---|---|---|
| | ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ: ಸದರಿ ಕಾರ್ಯಕ್ರಮಗಳು ಸಾರ್ವಜನಿಕರಿಗೆ ತಲುಪುತ್ತಿದೆಯೇ ಎಂಬುದನ್ನು ಗಮನಿಸುತ್ತಿರುವ ಅಧಿಕಾರಿಗಳ ವಿವರ ನೀಡುವುದು: | **<u>ಜಿಲ್ಲಾ ಮಕ್ಕಳ ರಕ್ಷಣಾ ಘಟಕ</u>** – ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳನ್ನು ರಚಿಸಲಾಗಿದೆ. ಈ ಘಟಕಗಳು ಮಕ್ಕಳ ಹಕ್ಕುಗಳು ಹಾಗೂ ಮಕ್ಕಳ ರಕ್ಷಣಾ ಕಾಯ್ದೆಗಳನ್ನು ಸಮರ್ಪಕವಾಗಿ ಕಾರ್ಯಾನುಷ್ಠಾನಗೊಳಿಸುತ್ತಿವೆ.<br>1. **<u>ಮಕ್ಕಳ ಸಹಾಯವಾಣಿ 1098</u>** – ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದು ಉಚಿತ ದೂರವಾಣಿಯಾಗಿರುತ್ತದೆ, ಸಂಕಷ್ಟದಲ್ಲಿರುವ / ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳಿಗೆ ತುರ್ತು ಸೇವೆಯನ್ನು ಒದಗಿಸಲು ಕಾರ್ಯನಿರ್ವಹಿಸುತ್ತಿದೆ, ಸದರಿ ಸಂಖ್ಯೆಯೊಂದಿಗೆ ಪ್ರಸ್ತುತ ERSS (Emergency Response Support System) -112 ವಿಲೀನಗೊಳಿಸಲಾಗಿದೆ.<br>2. **<u>ಮಕ್ಕಳ ಕಲ್ಯಾಣ ಸಮಿತಿಗಳು</u>**– ಬಾಲ್ಯ ವಿವಾಹ ಕ್ಕೊಳಪಟ್ಟ ಮಕ್ಕಳು ಸೇರಿದಂತೆ, ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ಎಲ್ಲಾ ಜಿಲ್ಲೆಗಳಲ್ಲಿಯೂ ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಲಾಗಿದೆ.<br>3. **<u>ಬಾಲಕರು/ ಬಾಲಕಿಯರ ಬಾಲಮಂದಿರಗಳು</u>**-ಬಾಲ್ಯ ವಿವಾಹಕ್ಕೊಳಪಟ್ಟ ಮಕ್ಕಳು ಸೇರಿದಂತೆ, ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಪುನರ್ವಸತಿಗಾಗಿ ಎಲ್ಲಾ ಜಿಲ್ಲೆಗಳಲ್ಲಿ ಬಾಲಕರು ಮತ್ತು ಬಾಲಕಿಯರಿಗಾಗಿ ಪ್ರತ್ಯೇಕ ಬಾಲಮಂದಿರಗಳು ಕಾರ್ಯನಿರ್ವಹಿಸುತ್ತಿವೆ.<br>4. **<u>ಮಕ್ಕಳ ವಿಶೇಷ ಪೊಲೀಸ್ ಘಟಕಗಳು</u>** – ಜೆಜೆ ಕಾಯ್ದೆಯನ್ವಯ ಜಿಲ್ಲೆಗಳಲ್ಲಿ ಮಕ್ಕಳ ವಿಶೇಷ ಪೊಲೀಸ್ಘಟಕಗಳನ್ನು ಸ್ಥಾಪಿಸಲಾಗಿದೆ.<br>ಮೇಲ್ಕಂಡ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಸಾರ್ವಜನಿಕರಿಗೆ ತಲುಪಲು ಅನುವಾಗುವಂತೆ ಅರಿವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.<br>ಜಿಲ್ಲೆಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಂದ ತಾಯಂದಿರ ಸಭೆ, ಸ್ತ್ರೀ ಶಕ್ತಿ ಸಭೆಗಳಲ್ಲಿ ಆಶಾ ಕಾರ್ಯಕರ್ತೆಯರ, ಗ್ರಾಮ ಹಾಗೂ ತಾಲ್ಲೂಕು ಮಟ್ಟದ ಸಭೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಜಾಗೃತಿ ಕಾರ್ಯಕ್ರಮಗಳಲ್ಲಿ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br>ಜಾಗೃತಿ ಮೂಡಿಸುವ ಬೋರ್ಡ್‌ಗಳ ಪ್ರದರ್ಶನ, ಆಟೋಗಳ ಮೇಲೆ ಜನನಿಬಿಡ ಪ್ರದೇಶಗಳಲ್ಲಿ ಮಕ್ಕಳ ರಕ್ಷಣೆ ಮತ್ತು ಜಾಗೃತಿ ಮೂಡಿಸುವ ಪೋಸ್ಟರ್‌ಗಳು ಹಾಗೂ ಸ್ಟಿಕ್ಕರ್‌ಗಳನ್ನು ಅಂಟಿಸಿ ಜಾಗೃತಿ ಮೂಡಿಸುವುದು, ರೇಡಿಯೋ ಬಾನುಲಿ ಮೂಲಕ ಮಕ್ಕಳ ರಕ್ಷಣೆ ಹಾಗೂ ಮಕ್ಕಳ ಕಾನೂನು ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.<br><br>ಸಾಮಾಜಿಕ ಜಾಲತಾಣಗಳಾದ ಯೂಟ್ಯೂಬ್, ಫೇಸ್ ಬುಕ್, ಟ್ವಿಟರ್, ವಾಟ್ಸಾ ರಿಲ್ಸ್, ಡಿಜಿಟಲ್ ವಾಲ್ ಪೈಂಟಿಂಗ್ ನಲ್ಲಿ ಬಾಲ್ಯ ವಿವಾಹ, ಬಾಲ ಕಾರ್ಮಿಕತೆ ಮಕ್ಕಳ ಹಕ್ಕುಗಳ ಮುಂತಾದ ವಿಷಯಗಳ ಬಗ್ಗೆ ಕಿರುಚಿತ್ರಗಳನ್ನು ಅಪ್‌ಲೋಡ್ ಮಾಡಲಾಗಿರುತ್ತದೆ.<br><br>ರಾಜ್ಯ ಮಟ್ಟದಲ್ಲಿ ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದಿ ಹಾಗೂ ವಿಕಲಚೇತನರ ಮತ್ತು ಹಿರಿಯನಾಗರಿಕರ ಸಬಲೀಕರಣ ಇಲಾಖೆ ಹಾಗೂ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ |

ಘಟಕ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ನೇತೃತ್ವದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾತ್ತದೆ.

ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳಿಗೆ ಹಾಗೂ ಇಲಾಖೆಯ ಕಾರ್ಯ ಚಟುವಟಿಕೆಗಳಿಗೆ /ಕಾಯ್ದೆ / ನಿಯಮಗಳ ಅನುಷ್ಠಾನಕ್ಕಾಗಿ ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವ ಇನ್ನಿತರೆ ಎಲ್ಲಾ ಇಲಾಖೆಗಳ (ಅಧಿಕಾರಿಗಳು / ಸಿಬ್ಬಂದಿಗಳು) ತರಬೇತಿ /ಜಾಗೃತಿ / ಅರಿವು ಕಾರ್ಯಕ್ರಮಗಳನ್ನು ನಿಯಮಿತವಾಗಿ ಆಯೋಜಿಸಲಾಗುತ್ತಿದೆ.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಬಾಲ್ಯ ವಿವಾಹ ತಡೆಗಟ್ಟಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದಿಂದ ಮೇಲ್ಕಂಡ ಕಾಯ್ದೆಯನ್ವಯ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ.

1) ಸುಪ್ರಿಂ ಕೋರ್ಟ್‌ನ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀ ಶಿವರಾಜ್ ಪಾಟೀಲ್ ನೇತೃತ್ವದ ಕೋರ್ ಕಮಿಟಿ ಶಿಫಾರಸ್ಸಿನನ್ವಯ ಬಾಲ್ಯವಿವಾಹ ನಿಷೇಧ ಕೋಶವನ್ನು ಪ್ರಾರಂಭಿಸಲಾಗಿದೆ.

2) ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಮತ್ತು ಬಾಲ್ಯವಿವಾಹ ನಿಷೇಧ ಕರ್ನಾಟಕ ನಿಯಮ,2014ನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ.

3) ಕರ್ನಾಟಕ ರಾಜ್ಯವು ಬಾಲ್ಯ ವಿವಾಹ ನಿಷೇಧ ಕಾಯ್ದೆ 2006ಕ್ಕೆ ತಿದ್ದುಪಡಿ ಮಾಡಿ ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ, 2016ನ್ನು ದಿನಾಂಕ:03.03.2018ರಿಂದ ಜಾರಿಗೊಳಿಸಿದೆ.

4) ಬಾಲ್ಯವಿವಾಹ ನಿಷೇಧ ಕಾಯ್ದೆ, 2006 ಸೆಕ್ಷನ್ 16ರ ಪ್ರಕಾರ ವಿವಿಧ ಇಲಾಖೆಗಳ ರಾಜ್ಯ, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಮಟ್ಟದ ಅಧಿಕಾರಿಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳನ್ನಾಗಿ ನೇಮಿಸಿ ದಿ:28.05.2018ರಂದು ಅಧಿಸೂಚನೆ ಹೊರಡಿಸಲಾಗಿದೆ.

5) ದಿ:30.08.2023ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಾಯಕ ನಿರ್ದೇಶಕರುಗಳನ್ನು ಸಹ ಬಾಲ್ಯವಿವಾಹ ನಿಷೇಧಾಧಿಕಾರಿಗಳನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.

6) ಚುನಾಯಿತ ಪ್ರತಿನಿಧಿಗಳು, ಕಲ್ಯಾಣ ಮಂಟಪ/ಪ್ರಿಂಟಿಂಗ್ ಪ್ರೆಸ್ ಮಾಲೀಕರು, ಧಾರ್ಮಿಕ ಮುಖಂಡರು, ಸಾಮೂಹಿಕ ವಿವಾಹ ಸಂಘಟನೆಗಳ ಮುಖ್ಯಸ್ಥರಿಗೆ ಬಾಲ್ಯ ವಿವಾಹ ನಿಷೇಧದ ಬಗ್ಗೆ ಜಾಗೃತಿ ಮೂಡಿಸಲು ತರಬೇತಿ ಮತ್ತು ಸಂವೇದನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

7) ಬಾಲ್ಯವಿವಾಹ ನಿಷೇದ ಅಧಿಕಾರಿಗಳಿಗೆ(CMPO) ಅವರ ಪಾತ್ರಗಳು ಮತ್ತು ಜವಾಬ್ದಾರಿಗಳ ಬಗ್ಗೆ ಜಾಗೃತಿ ಮೂಡಿಸಲು ನಿಯಮಿತವಾಗಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

8) ಬಾಲ್ಯ ವಿವಾಹ ನಿಷೇಧದ ಬಗ್ಗೆ ಬಸ್ ಜಾಹೀರಾತು, ಗೋಡೆ ಬರಹಗಳು, ರೇಡಿಯೋ, ಟಿ.ವಿ, ಬೀದಿ ನಾಟಕಗಳು, ಪೋಸ್ಟರ್‌ಗಳು/ ಶಾಸನಬದ್ಧ ಫಲಕಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಶಾಲೆಗಳಲ್ಲಿ ಹಾಗೂ ಧಾರ್ಮಿಕ ಕೇಂದ್ರಗಳಲ್ಲಿ ಅಳವಡಿಸುವ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

9) ಅಂಚೆ ಇಲಾಖೆಯ ಸಹಯೋಗದೊಂದಿಗೆ ರಾಜ್ಯ ಮಟ್ಟದ KARNAPEX- 2024 ರ ಕಾರ್ಯಕ್ರಮದಲ್ಲಿ 'ಬಾಲ್ಯ ವಿವಾಹ ನಿಷೇಧ ಕಾರ್ಯಕ್ರಮ ಅನುಷ್ಠಾನದ' ಕುರಿತು ವಿಶೇಷ ಅಂಚೆ ಲಕೋಟೆಯನ್ನು ಬಿಡುಗಡೆ ಮಾಡಲಾಗಿದೆ.

10) ಯುವ ಜನತೆಯಲ್ಲಿ ಬಾಲ್ಯ ವಿವಾಹ ನಿಷೇಧದ ಬಗ್ಗೆ ಜಾಗೃತಿ ಮೂಡಿಸಲು ಯಾದಗಿರಿ, ಬೆಳಗಾವಿ, ತುಮಕೂರು, ಚಾಮರಾಜನಗರ ಜಿಲ್ಲೆಗಳಲ್ಲಿ 'ಯುವ ಮೇಳ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

11) ಬಾಲ್ಯವಿವಾಹ ನಿಷೇಧ ಕಾಯೆ ಯ ಸುಗಮ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ತಮ್ಮ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲು Standard Operating Procedure (SOP) ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಲಾಗಿದೆ.

12) "ಸ್ಫೂರ್ತಿ"-"ಹದಿಹರೆಯದ ಬಾಲಕಿಯರ ಸಬಲೀಕರಣ" ಕಾರ್ಯಕ್ರಮವು 12-16 ವರ್ಷದ 1.5 ಲಕ್ಷ ಹದಿಹರೆಯದ ಹೆಣ್ಣು ಮಕ್ಕಳಲ್ಲಿ ಪೌಷ್ಟಿಕ ಮಟ್ಟ ಸುಧಾರಣೆ, ಪೋಷಕರ ಸಂಬಂಧ ಸುಧಾರಣೆ, ಶಾಲಾ ಬಿಡುವಿಕೆ ಪ್ರಮಾಣ ಕಡಿಮೆಗೊಳಿಸುವುದು ಮತ್ತು ನಿರ್ಧಾರ ಕೈಗೊಳ್ಳುವಲ್ಲಿ ಸುಧಾರಣೆಯ ಉದ್ದೇಶ ಹೊಂದಿದ್ದು, ಬೆಳಗಾವಿ, ಬಾಗಲಕೋಟೆ, ಕಲ್ಬುರ್ಗಿ, ವಿಜಯಪುರ ಮತ್ತು ರಾಯಚೂರು ಜಿಲ್ಲೆಗಳ 11 ತಾಲ್ಲೂಕುಗಳಲ್ಲಿ "ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್" (ಕೆಹೆಚ್‌ಪಿಟಿ) ಮೂಲಕ ಹಮ್ಮಿಕೊಳ್ಳಲಾಗಿದೆ.

13) ಮಾನ್ಯ ಮುಖ್ಯಮಂತ್ರಿಗಳ ದಿನಾಂಕ:15.04.2024ರ ಟಿಪ್ಪಣಿಯಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ವಿವಿಧ ಭಾಗೀದಾರ ಇಲಾಖೆಗಳು ಸಮನ್ವಯತೆಯಿಂದ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಲು ಅಗತ್ಯ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ನೀಡಿರುವ ನಿರ್ದೇಶನದನ್ವಯ, ಇಲಾಖಾವಾರು ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ನಿಗದಿಪಡಿಸಿ ಪ್ರಸ್ತಾವನೆಯನ್ನು ಸಚಿವ ಸಂಪುಟದ ಅನುಮೋದನೆಗೆ ಸಲ್ಲಿಸಲಾಗಿದೆ.

<table>
<tr><td></td><td></td><td>ರಾಜ್ಯಮಟ್ಟದಲ್ಲಿ ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲ್ಲೂಕು ಹಂತದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಇವರ ನೇತೃತ್ವದಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.</td></tr>
<tr><td>ಈ)</td><td>ಮಕ್ಕಳ ರಕ್ಷಣೆಗೆ ಇರುವಂತಹ ಕಾನೂನಿನ ಅರಿವನ್ನು ಪ್ರೌಢ ಶಿಕ್ಷಣದಿಂದಲೇ ಮಕ್ಕಳಿಗೆ ಪಾಠಗಳ ಮೂಲಕ ತಿಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ:</td><td>10ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಕ್ರಮದಲ್ಲಿ ಬಾಲ್ಯವಿವಾಹಕ್ಕೆ ಕಾರಣಗಳು, ದುಷ್ಪರಿಣಾಮಗಳು ಹಾಗೂ ತಡೆ ಕುರಿತು ಮುದ್ರಿಸಲಾಗಿದೆ.</td></tr>
<tr><td>ಉ)</td><td>ಪ್ರಸ್ತುತ ಇರುವ ಪೋಕ್ಸೋ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಯಡಿಯಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ: ಇದರಲ್ಲಿ ಎಷ್ಟು ಪ್ರಕರಣಗಳು ಇತ್ಯರ್ಥವಾಗಿದೆ: ಎಷ್ಟು ಪ್ರಕರಣಗಳು ಬಾಕಿ ಇದೆ: ಇಂತಹ ಪ್ರಕರಣಗಳನ್ನು ತ್ವರಿತಗತಿಯಲ್ಲಿ ನಡೆಯುವಂತೆ ಮಾಡಲು ಸರ್ಕಾರ ಕ್ರಮವಹಿಸಿದೆಯೇ: ಈ ಜವಾಬ್ದಾರಿಯನ್ನು ಯಾವ ಯಾವ ಅಧಿಕಾರಿಗಳಿಗೆ ವಹಿಸಲಾಗಿದೆ:</td><td>ಪ್ರಸ್ತುತ ಪೋಕ್ಸೊ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಯಲ್ಲಿ ದಾಖಲಾಗಿರುವ, ಇತ್ಯರ್ಥವಾಗಿರುವ ಹಾಗೂ ಬಾಕಿ ಇರುವ ಪ್ರಕರಣಗಳ ಮಾಹಿತಿಯು ಈ ಕೆಳಕಂಡಂತಿರುತ್ತದೆ.
<table>
<tr><th>ವಿವರ</th><th>ವರ್ಷದಪ್ರಾರಂಭದಲ್ಲಿಬಾಕಿಯಿರುವಪ್ರಕರಣಗಳು</th><th>ದಾಖಲಾದಪ್ರಕರಣಗಳು</th><th>ಇತ್ಯರ್ಥವಾದಪ್ರಕರಣಗಳು</th><th>ಬಾಕಿಯಿರುವಪ್ರಕರಣಗಳು</th></tr>
<tr><td>ಪೋಕ್ಸೋ</td><td>1617</td><td>273</td><td>222</td><td>1668</td></tr>
<tr><td>ಬಾಲ್ಯ ವಿವಾಹ</td><td>404</td><td>324</td><td>246</td><td>482</td></tr>
</table>
<ul><li>ಟಿಪ್ಪಣಿ:</li></ul>
ಬಾಲ್ಯ ವಿವಾಹಕ್ಕೆ ಸಂಬಂಧಿಸಿದಂತೆ, 2023-24ನೇ ಸಾಲಿನ ವರ್ಷಾಂತ್ಯಕ್ಕೆ 404 ಪ್ರಕರಣಗಳಡಿ ಎಫ್.ಐ.ಆರ್ ದಾಖಲಾಗಿದ್ದು, ಸದರಿ ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಉಳಿದಿರುತ್ತದೆ.<br><br>
ಮಕ್ಕಳ ರಕ್ಷಣಾ ಕಾಯ್ದೆಗಳ ಕುರಿತು ಅಧಿಕಾರಿ / ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ತರಬೇತಿ / ಜಾಗೃತಿ ಮೂಡಿಸುವ ಕಾರ್ಯವನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ನಿರ್ವಹಿಸುತ್ತದೆ.</td></tr>
<tr><td>ಊ)</td><td>ಬಾಲ್ಯ ವಿವಾಹ ಮತ್ತು ದೌರ್ಜನ್ಯಗಳನ್ನು ತಡೆಯಲು ಹಾಗೂ ಕ್ರಮ ತೆಗೆದುಕೊಳ್ಳಲು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳನ್ನು ಒಳಗೊಂಡಂತೆ ಬೇರೆ ಬೇರೆ ಇಲಾಖೆಯ ಮುಖ್ಯಸ್ಥರನ್ನು</td><td>ಸರ್ಕಾರದ ಅಧಿಸೂಚನೆ ದಿನಾಂಕ:28.05.2018 ಹಾಗೂ ಸೇರ್ಪಡೆ ಆದೇಶ ದಿನಾಂಕ: 10.08.2023 ರನ್ವಯ ಬಾಲ್ಯ ವಿವಾಹಗಳನ್ನು ತಡೆಯಲು ಬಾಲ್ಯ ವಿವಾಹ ನಿಷೇಧ ಕಾಯ್ದೆ 2006ರ ಪ್ರಕಾರ ಈ ಕೆಳಕಂಡ ಇಲಾಖೆಯ ಮುಖ್ಯಸ್ಥರನ್ನು ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳೆಂದು ನೇಮಿಸಲಾಗಿದೆ.
<ol>
<li>ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.</li>
<li>ಯೋಜನಾ ನಿರ್ದೇಶಕರು, ಐಸಿಪಿಎಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.</li>
<li>ಡೈರೆಕ್ಟರ್ ಜನರಲ್ ಆಫ್ ಪೊಲೀಸ್.</li>
<li>ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (ತರಬೇತಿ),</li>
</ol></td></tr>
</table>

| | | |
|---|---|---|
| | ನೇಮಿಸಲಾಗಿದೆಯೇ: ಹಾಗೂ ಅವರು ಕ್ರಮ ಕೈಗೊಳ್ಳಲು ಅವರಿಗೆ ಅಧಿಕಾರ ಇದೆಯೇ? | ಬೆಂಗಳೂರು.<br>5. ಸಂಬಂಧಿಸಿದ ರೇಂಜ್ ನ ಐ.ಜಿ.ಪಿ.<br>6. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ.<br>7. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ.<br>8. ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ.<br>9. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.<br>10. ಆಯುಕ್ತರು, ಕಾರ್ಮಿಕ ಇಲಾಖೆ.<br>11. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ.<br>12. ಆಯುಕ್ತರು, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ.<br>13. ನಿರ್ದೇಶಕರು (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.<br>14. ನಿರ್ದೇಶಕರು, ಟ್ರೈಬಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್. |

ಮಮಇ 88 ಮಭಾಬ 2024

**(ಲಕ್ಷ್ಮೀ ಆರ್. ಹೆಬ್ಬಾಳ್ಕರ್)**
ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

# ಅನುಬಂಧ-1

| ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:372(319)ಕ್ಕೆ ಉತ್ತರಿಸುವ ಸಂಬಂಧ ರಾಜ್ಯದಲ್ಲಿ ಕಳೆದ 03 ವರ್ಷದ ಅವಧಿಯಲ್ಲಿ ಎಷ್ಟು ಬಾಲ್ಯ ವಿವಾಹಗಳ ಪ್ರಕರಣಗಳು ನಡೆದಿರುವ ಬಗ್ಗೆ ಮಾಹಿತಿಯನ್ನು ಸಲ್ಲಿಸುವ ಕುರಿತು | | | | |
|---|---|---|---|---|
| ಕ್ರ.ಸಂ | ಜಿಲ್ಲೆಯ ಹೆಸರು | 2021-22 | 2022-23 | 2023-24 |
| | | ದಾಖಲಾದ ಪ್ರಕರಣಗಳ ಸಂಖ್ಯೆ | ದಾಖಲಾದ ಪ್ರಕರಣಗಳ ಸಂಖ್ಯೆ | ದಾಖಲಾದ ಪ್ರಕರಣಗಳ ಸಂಖ್ಯೆ |
| 1 | ಬಾಗಲಕೋಟೆ | 45 | 28 | 12 |
| 2 | ಬೆಂಗಳೂರು ನಗರ | 55 | 60 | 33 |
| 3 | ಬೆಂಗಳೂರು ಉತ್ತರ | 0 | 0 | 6 |
| 4 | ಬೆಂಗಳೂರು ದಕ್ಷಿಣ | 0 | 0 | 2 |
| 5 | ಬೆಂಗಳೂರು ಪೂರ್ವ | 0 | 0 | 87 |
| 6 | ಬೆಂಗಳೂರು ಪಶ್ಚಿಮ | 0 | 0 | 8 |
| 7 | ಬೆಂಗಳೂರು (ಗ್ರಾ) | 23 | 24 | 18 |
| 8 | ಬೆಳಗಾವಿ | 32 | 60 | 43 |
| 9 | ಬಳ್ಳಾರಿ | 208 | 124 | 77 |
| 10 | ಬೀದರ್ | 0 | 0 | 4 |
| 11 | ಚಿಕ್ಕಬಳ್ಳಾಪುರ | 7 | 4 | 6 |
| 12 | ಚಿಕ್ಕಮಂಗಳೂರು | 17 | 8 | 5 |
| 13 | ವಿಜಯಪುರ | 24 | 15 | 11 |
| 14 | ಚಾಮರಾಜನಗರ | 7 | 0 | 4 |
| 15 | ಚಿತ್ರದುರ್ಗ | 16 | 31 | 79 |
| 16 | ದಾವಣಗೆರೆ | 6 | 14 | 21 |
| 17 | ಧಾರವಾಡ | 22 | 16 | 30 |
| 18 | ಗದಗ | 2 | 2 | 4 |
| 19 | ಕಲಬುರಗಿ | 8 | 4 | 4 |
| 20 | ಹಾಸನ | 27 | 7 | 2 |

| | | | | |
|---|---|---|---|---|
| 21 | ಹಾವೇರಿ | 0 | 0 | 5 |
| 22 | ಉತ್ತರಕನ್ನಡ | 1 | 1 | 0 |
| 23 | ಕೊಡಗು | 4 | 2 | 5 |
| 24 | ಕೋಲಾರ | 64 | 71 | 129 |
| 25 | ಕೊಪ್ಪಳ | 2 | 2 | 5 |
| 26 | ಮಂಡ್ಯ | 74 | 62 | 75 |
| 27 | ದಕ್ಷಿಣಕನ್ನಡ | 1 | 0 | 0 |
| 28 | ಮೈಸೂರು | 53 | 60 | 76 |
| 29 | ರಾಯಚೂರು | 8 | 7 | 5 |
| 30 | ರಾಮನಗರ | 9 | 13 | 9 |
| 31 | ಶಿವಮೊಗ್ಗ | 40 | 65 | 77 |
| 32 | ತುಮಕೂರು | 111 | 95 | 43 |
| 33 | ಉಡುಪಿ | 2 | 2 | 6 |
| 34 | ಯಾದಗಿರಿ | 9 | 3 | 4 |
| 35 | ವಿಜಯನಗರ | 0 | 0 | 4 |
| | **ಒಟ್ಟು** | **877** | **780** | **899** |

## ಅನುಬಂಧ -1

### ಕಳೆದ 3 ವರ್ಷಗಳಲ್ಲಿ ಬಾಲ್ಯವಿವಾಹ ಪ್ರಕರಣಗಳು ನಡೆದ ಮಾಹಿತಿ

| ಕ್ರ.ಸಂ | ಜಿಲ್ಲೆಯ ಹೆಸರು | 2021-22 | 2022-23 | 2023-24 |
|---|---|---|---|---|
| 1 | ಬಾಗಲಕೋಟೆ | 39 | 28 | 19 |
| 2 | ಬೆಂಗಳೂರು (ಗ್ರಾ) | 8 | 5 | 8 |
| 3 | ಬೆಂಗಳೂರು (ನ) | 13 | 7 | 10 |
| 4 | ಬೆಳಗಾವಿ | 16 | 16 | 22 |
| 5 | ಬಳ್ಳಾರಿ | 17 | 7 | 9 |
| 6 | ಬೀದರ್ | 0 | 0 | 7 |
| 7 | ವಿಜಯಪುರ | 27 | 17 | 35 |
| 8 | ಚಾಮರಾಜನಗರ | 5 | 3 | 52 |
| 9 | ಚಿಕ್ಕಬಳ್ಳಾಪುರ | 27 | 7 | 13 |
| 10 | ಚಿಕ್ಕಮಗಳೂರು | 17 | 8 | 6 |
| 11 | ಚಿತ್ರದುರ್ಗ | 9 | 5 | 84 |
| 12 | ದಕ್ಷಿಣ ಕನ್ನಡ | 1 | 0 | 0 |
| 13 | ದಾವಣಗೆರೆ | 6 | 6 | 6 |
| 14 | ಧಾರವಾಡ | 10 | 6 | 12 |
| 15 | ಗದಗ | 2 | 2 | 1 |
| 16 | ಕಲಬುರ್ಗಿ | 6 | 5 | 2 |
| 17 | ಹಾಸನ | 39 | 10 | 3 |
| 18 | ಹಾವೇರಿ | 0 | 1 | 4 |
| 19 | ಕೊಡಗು | 3 | 2 | 3 |
| 20 | ಕೋಲಾರ | 6 | 8 | 80 |
| 21 | ಕೊಪ್ಪಳ | 0 | 1 | 2 |
| 22 | ಮಂಡ್ಯ | 76 | 62 | 66 |
| 23 | ಮೈಸೂರು | 33 | 36 | 70 |
| 24 | ರಾಯಚೂರು | 12 | 6 | 3 |
| 25 | ರಾಮನಗರ | 11 | 13 | 25 |
| 26 | ಶಿವಮೊಗ್ಗ | 18 | 51 | 79 |
| 27 | ತುಮಕೂರು | 11 | 10 | 19 |
| 28 | ಉಡುಪಿ | 0 | 0 | 4 |
| 29 | ಉತ್ತರ ಕನ್ನಡ | 1 | 1 | 0 |
| 30 | ಯಾದಗಿರಿ | 5 | 2 | 3 |
| 31 | ವಿಜಯನಗರ | 0 | 3 | 72 |
| | **Total** | **418** | **328** | **719** |